ಯೋಧರು ಯಾರಿದಾರೆ? ಆದರೆ ಮುಂಗೋಪಿ, ಯುದ್ಧದ ಕೆಟ್ಟ ಮದ ಬೇರೆ

ಈಗ ವೀರಶಯನದಲ್ಲಿ ಮಲಗಿಬಿಟ್ಟಿದಾನೆ

ನೋಡು ಮಾಧವ, ನನ್ನ ಮಗ ಕಣಪ್ಪ ಇದು

ಕಿರೀಟ ಹಾಕ್ಕೊಂಡಿರೋರಲ್ಲೆಲ್ಲ ಎದ್ದು ಕಾಣತಿದ್ದ. ವೈರಿಗಳನ್ನ ಸುಟ್ಟು ಹಾಕತಿದ್ದ

ಈಗ ರಕ್ತದ ಕೆಸರಲ್ಲಿ ಬಿದ್ದುಕೊಂಡಿದಾನೆ

ಕಾಲದ ಹೊರಳಾಟ ನೋಡಿದೆಯಾ

ಅವತ್ತು ಅವನ ಸುತ್ತ ಎಂಥೆಂಥ ಹೆಣ್ಣುಗಳು ಕುಣೀತಾ ನಲೀತಾ ಇದ್ದರು

ಇವತ್ತು ಇವನ ಸುತ್ತಾ ನರಿಗಳು ಕುಣೀತಾ ಇವೆ

ಸೇನೇನ ತಂದದ್ದು ಅಕ್ಷೋಹಿಣಿ ಲೆಕ್ಕದಲ್ಲೇ

ಆದರೆ ಇವನ ಅನೀತಿ

ಇವನನ್ನ ಒಂಟಿಮಾಡಿ ಕೊಂದು ಬಿಟ್ಟಿತು

ವಿದುರನ್ನ ಹೀಗಳೆದು ಮಂದ ಭಾಗ್ಯನಾದ

ಅಪ್ಪನ ಮಾತನ್ನೂ ಕೇಳಲಿಲ್ಲ

ದೊಡ್ಡವರ ಮಾನ ತೆಗೆದು ಹುಡುಗು ಬುದ್ಧೀಲಿ ಸಾವಿನ ದವಡೆಗೆ ಬಿದ್ದ ಬುದ್ಧಿಗೇಡಿ.

ಭೂಮಿ ಮೇಲೆ ದಾಯಾದಿಗಳೇ ಇಲ್ಲದ ಹಾಗೆ ಮಾಡಿದೀನಿ ಅಂತ ಹದಿಮೂರು ವರ್ಷ ಅಲ್ಲಾಡದೆ ಸಿಂಹಾಸನದ ಮೇಲೆ ಕೂತಿದ್ದ ಈ ಮಹಾರಾಜ. ಈಗ ಜೀವವೆ ಇಲ್ಲದೆ ಈ ಹೆಣ ಭೂಮಿ ಮೇಲೇ ಮಲಗಿದಾನೆ ನೋಡು. ನನಗೆ ಸಂಕಟ ಆಗತಾ ಇರೋದು ಮಗ ಸತ್ತದ್ದಕ್ಕಲ್ಲ ಮಾಧವ.

ಈ ಹೆಣ್ಣುಮಕ್ಕಳು ಸತ್ತ ಶೂರರ ಸುತ್ತ ಶೋಕ ಮಾಡತಿದಾರಲ್ಲಾ, ಅದನ್ನ ತಡಕೊಳ್ಳಲಾರೆ ನಾನು.

ದುರ್ಯೋಧನನ ತೊಡೆಯೇರುತಾ ಇದ್ದ ಒಂದೂ ಕೊಂಕಿಲ್ಲದ ಚೆಲುವೇ ಭಾನುಮತಿ ನೋಡು. ಅವಳು ನನ್ನ ಮಗ, ಮಹೀಭುಜನ ಭುಜ ತಬ್ಬಿಕೊಂಡು ಎಷ್ಟು ಸುಖವಾಗಿದ್ದಳು.

ಈ ರಣರಂಗ ನೋಡತಲೇ ದುಃಖ ತಡೀಲಾರದೆ ಬಿದ್ದು ಬಿಟ್ಟಳಲ್ಲಾ. ಈ ನಮ್ಮ ಲಕ್ಷ್ಮಣನ ತಾಯಿ ರಾಜನ ಮಗಳು ಇವಳನ್ನ ಈ ಸ್ಥಿತೀಲಿ ನೋಡಿದ ಮೇಲೆ ಮನಸ್ಸಿಗೆ ಶಾಂತಿ ಎಲ್ಲೀದು.

ನನ್ನ ಮಗ ಅವನ ಮಗನ ಸಮೇತ ಸತ್ತು ಬಿದ್ದಿದಾರಲ್ಲಾ ಈಗ–

ಈ ಭಾನುಮತಿ ರಕ್ತದಲ್ಲಿ ನೆನೆದ ಮಗನ ಮೈಯನ್ನ ಮೂಸುತಾ ಕೈಯಲ್ಲಿ ದುರ್ಯೋಧನನ ಶರೀರಾನ ಸವರತಾ ಕೂತಿದಾಳೆ. ಯಾರಿಗೇ ಅಂತ ಸಂಕಟಪಟ್ಟಾಳು ಮಗನಿಗೋ ಗಂಡಂಗೋ? ಅಲ್ಲಿ ನೋಡು ಮಾಧವಾ, ಅಂಗೈ ಅಗಲಿಸಿಕೊಂಡು ತಲೆ ಚಚ್ಚಿಕೋತಾ ಕುರುರಾಜನ ಎದೆ ಮೇಲೆ ಬೀಳತಾ ಇದಾಳಲ್ಲ ಕಾಣತಾ ಇದೆಯಾ?

ಮಗನ ಮುಖ ಗಂಡನ ಮುಖ ಸವರತಾ ಕೂತು ಬಿಟ್ಟಿದಾಳೆ ತಪಸ್ವಿನಿ. ನೋಡಿದರೂ ಎದೆ ಒಡೀತಿಲ್ಲವಲ್ಲಾ. ನನಗೆ ನನ್ನ ಮಕ್ಕಳು ನೂರು ಜನವೂ ಭೀಮಸೇನನ ಗದೇಲಿ ಅಪ್ಪಚ್ಚಿಯಾಗಿ ರಣರಂಗದಲ್ಲಿ ಬಿದ್ದಿದಾರಲ್ಲಾ, ಅಯ್ಯೋ ಪಾಪ, ಇನ್ನೂ ಬಾಲೆಯರು ನನ್ನ ಸೊಸೇರು ಗಂಡನ ಜತೆಗೆ ಮಕ್ಕಳನ್ನೂ ಕಳಕೊಂಡಿದಾರೆ. ತಲೆ ಮುಸುಕು ಬಿದ್ದು ಹೋಗಿ ರಣರಂಗದಲ್ಲೆಲ್ಲ ಓಡಾಡತಿದಾರಲ್ಲ, ಇದನ್ನ ನೋಡೋದು ಕಣಪ್ಪ ನನ್ನ ಸಂಕಟ.

ಉಪ್ಪರಿಗೆಯಿಂದ ಕೆಳಗಿಳಿದವರೇ ಅಲ್ಲ

ಇವತ್ತು ಆಪತ್ತಿಗೆ ಬಿದ್ದು ರಕ್ತದಲ್ಲಿ ತೊಯ್ದಿರೋ ನೆಲದ ಮೇಲೆ ಓಡಾಡ್ತಾ ಇದಾರೆ

ಹದ್ದು ನರಿ ಕಾಗೆಗಳನ್ನ ಅಟ್ಟತಾ

ದುಃಖ ತುಂಬಿ ಹುಚ್ಚೀರ ಥರ ಅಲೀತಿದಾರೆ

ಕೆಲವರ ಒಡಹುಟ್ಟುಗಳು, ಕೆಲವರ ಅಪ್ಪಂದೀರು, ಕೆಲವರಿಗೆ ಮಕ್ಕಳು ಹತರಾಗಿ ಭೂಮೀಲಿ ಬಿದ್ದಿದಾರೆ

ಅವರನ್ನ ನೋಡತಾ ಅವರ ಭುಜ ತಬ್ಬಿಕೊಂಡು ಸಂಕಟಪಡತಾ ಇದಾರಲ್ಲಾ ಇಳಿಪ್ರಾಯದವರು ಹೆಂಗಸರು ಮುದುಕರು. ಇವರದೂ ನನ್ನದೂ ಪೂರ್ವಜನ್ಮದ ಪಾಪ ಅಂತ ಕಾಣತ್ತೆ. ಧರ್ಮರಾಜನೇ ಇವರನ್ನೆಲ್ಲ ಕೆಡವಿ ಹಾಕಿದ ಅಂದ ಮೇಲೆ ಒಳ್ಳೇದೋ ಕೆಟ್ಟದೋ ಯಾವುದೇ ಇರಲಿ ಮಾಡಿದ್ದಂತು ನಾಶ ಆಗಲ್ಲ ಕಣಪ್ಪ.

ಇದೋ ಇಲ್ಲಿ

ಶತ್ರೂನ ಕೊಲ್ಲೋ ಶೂರ ದುಶ್ಶಾಸನ

ಅವನ ಮೈಯ ರಕ್ತಾನೆಲ್ಲ ಭೀಮ ಕುಡಿದು ಹಳದೀ ಮಾಡಿ ಕೆಳಗೆ ಎಸೆದಿದಾನೆ. ಜೂಜಲ್ಲಿ ದ್ರೌಪದೀಗೆ ಕೊಟ್ಟ ನರಹಿಂಸೆ ನೆನದು ಗದೇಲಿ ಭೀಮಸೇನನಿಂದ... ನೋಡು ಮಾಧವಾ... ಈ ನನ್ನ ಮಗನನ್ನ ಇವನು ಅಣ್ಣನನ್ನ ಕರ್ಣನನ್ನ ಖುಷಿಪಡಿಸೋಕೆ ಅಂತ ಜೂಜಲ್ಲಿ ಸೋತ ದ್ರೌಪದೀನ ನೋಡಿ–

'ಪಾಂಚಾಲೀ ನೀನು ದಾಸಿ ಈಗ ಜಲ್ದಿ ನಡಿ ನಮ್ಮ ಮನೇಗೆ' ಅಂತ ಅರಚಿಕೊಂಡ.

ಆಗ ರಾಜಾ ದುರ್ಯೋಧನನಿಗೆ ಹೇಳಿದ್ದೆ

ಈ ಶಕುನಿ ಮೃತ್ಯು ಪಾಶ ಹಿಡಕೊಂಡಿದಾನೆ

ಬರೀ ದುರ್ಬುದ್ಧಿ ಹೇಳತಾ ಜಗಳ ತಂದು ಹಾಕತಾನೆ. ಅವನ ಸಹವಾಸ ಬಿಡು. ಪಾಂಡವರನ್ನ ಈ ಶ್ಯಾಮೇನ ಈ ಕೂಡಲೇ ಬಿಟ್ಟುಬಿಡು.

ಲೋ ದುರ್ಬುದ್ಧೀ, ಆನೇನ ಕೊಳ್ಳಿಯಿಂದ ತಿವಿಯೋ ಹಾಗೆ ಮಾತಿನ ಬಾಣದಲ್ಲಿ ಅವಳಿಗೆ ಚುಚ್ಚತಾ ಭೀಮಸೇನನನ್ನ ಕೆರಳಿಸ್ತಾ ಇದೀಯೆ, ಬೇಡ ಕಿಚ್ಚು ಮಚ್ಚರ ಒಳಗೆ ಮಡಗಿಕೊಂಡು ಅವನು.

ಗೂಳಿಗೆ ವಿಷ ಉಗಿಯೋ ಹಾವಿನ ಥರ ವಿಷ ಉಗೀತಾನೆ ಅಂದೆ.

ಈಗ ಕಿತ್ತು ಹೋದ ತನ್ನ ತೋಳು ಚೆಲ್ಲಿಕೊಂಡು ದುಶ್ಶಾಸನ ಬಿದ್ದಿದಾನೆ.

ಏನೇ ಕೋಪ ಇರಲಿ ರಣರಂಗದಲ್ಲಾದರೂ ಹೀಗೆ ರಕ್ತ ಕುಡಿಯೋದಾ!

ಭೀಮ ಅತೀ ಮಾಡಿಬಿಟ್ಟ ಅತಿಘೋರ ಮಾಡಿಬಿಟ್ಟ.

■

# ಧರ್ಮರಾಯನ ಆಳ್ವಿಕೆಯಲ್ಲಿ ಧೃತರಾಷ್ಟ್ರ ಗಾಂಧಾರಿ

**ಜನಮೇಜಯ:** ಮಕ್ಕಳು ಸತ್ತರು, ಮಂತ್ರಿಗಳು ಸತ್ತರು, ಆ ಜನಾಧಿಪತಿಗೆ ಆಸರೆಯೇ ಇಲ್ಲ. ಗಾಂಧಾರಿಯ ಜತೆ ಆ ರಾಜ್ಯದಲ್ಲಿ ಹೇಗಿದ್ದ ಅವನು? ಎಷ್ಟು ಕಾಲ ನನ್ನ ಮುತ್ತಾತ ಆ ರಾಜ್ಯದಲ್ಲಿದ್ದ, ಹೇಳು ವೈಶಂಪಾಯನ.

**ವೈಶಂಪಾಯನ:** ಪಾಂಡವರಿಗೆ ರಾಜ್ಯ ಬಂದ ಮೇಲೆ ಆಸರೆಯಿಲ್ಲದ ಧೃತರಾಷ್ಟ್ರನನ್ನೇ ಮುಂದಿಟ್ಟುಕೊಂಡು ರಾಜ್ಯ ಆಳುತಿದ್ದರು. ಪಾಂಡವರು ಏನು ಮಾಡಿದರೂ ಅವನನ್ನು ಕೇಳಿಯೆ ಮಾಡುತಿದ್ದರು. ಈ ಥರ ಹದಿನೈದು ವರ್ಷ ನಡೆಯಿತು.

ಅಷ್ಟು ವರ್ಷವೂ ಆ ವೀರರು ರಾಜನ ಸೇವೆ ಮಾಡಿದರು. ಅವನ ಕಾಲಿಗೆ ದಿನಾ ತಪ್ಪದೆ ಬೀಳುತಿದ್ದರು. ಧರ್ಮರಾಜ ಹಾಗೆ ಆಜ್ಞೆ ಮಾಡಿದ್ದ. ಇವರು ಬಂದಾಗಲೆಲ್ಲ ಅವನೂ ಅವರ ನೆತ್ತಿ ಮೂಸಿ ಅವರೆಲ್ಲ ಕೆಲಸಕ್ಕೆ ಒಪ್ಪಿಗೆ ಕೊಡುತಿದ್ದ. ಕುಂತೀಭೋಜನ ಮಗಳು ಕುಂತಿಯೂ ಗಾಂಧಾರಿಯನ್ನು ಅನುಸರಿಸಿಕೊಂಡೇ ಇದ್ದಳು. ದ್ರೌಪದಿ, ಸುಭದ್ರೆ, ಅಷ್ಟೇ ಅಲ್ಲ ಪಾಂಡವರ ಉಳಿದ ಹೆಂಗಸರೂ ಇಬ್ಬರು ಅತ್ತೆಯರನ್ನು ಒಂದೇ ಸಮನಾಗಿ ಕಾಣುತಿದ್ದರು. ಹಾಸಿಗೆ, ಉಡುಪು, ಒಡವೆ ಎಲ್ಲವೂ ಅವರಿಗೆ ತಕ್ಕನಾದದ್ದೇ.

ಹಾಗೆಯೇ ಬಗೆ ಬಗೆಯ ಊಟ ತಿಂಡಿ. ಅದೂ ರಾಜರಿಗೆ ತಕ್ಕನಾದದ್ದು ಎಲ್ಲವನ್ನೂ ಯುಧಿಷ್ಠಿರ ತಾನೇ ಧೃತರಾಷ್ಟ್ರನಿಗೆ ತಂದೊಪ್ಪಿಸುತ್ತಾ ಇದ್ದ. ಆ ವಯಸ್ಸಾದವನನ್ನು, ಮಕ್ಕಳನ್ನು ಕಳೆದುಕೊಂಡ ಆ ಜನಾಧಿಪತಿಯನ್ನು ವಿದುರ, ಸಂಜಯ, ಯುಯುತ್ಸುಗಳು ಸೇವೆ ಮಾಡಿಕೊಂಡಿದ್ದರು. ದ್ರೋಣನ ಹೆಂಡತಿಯ ಅಣ್ಣ ಕೃಪ ಮಹಾ ಬ್ರಾಹ್ಮಣ ಅವನು. ಅವನೂ ಸದಾ ಧೃತರಾಷ್ಟ್ರನ ಜತೆಗೆ ಇರುತ್ತಿದ್ದ. ವ್ಯಾಸ ಕೂಡ ದಿನಾ ಅವನ ಹತ್ತಿರಕ್ಕೆ ಬಂದು ಪಿತೃರಾಕ್ಷಸರ ಕತೆ ಹೇಳುತ್ತಿದ್ದ. ಧೃತರಾಷ್ಟ್ರ ಹೇಳಿದ ಹಾಗೆ ವಿದುರ ಅವನ ದಿನನಿತ್ಯದ ವ್ಯವಹಾರಗಳು ನಡೆಯುವ ಹಾಗೆ ನೋಡಿಕೊಳ್ಳುತ್ತಿದ್ದ. ವಿದುರನ ನಯವಂತಿಕೆ ಧೃತರಾಷ್ಟ್ರನ ಎಷ್ಟೋ ಕೆಲಸಗಳು ಅವನ ಸಾಮಂತರ ಮೂಲಕ ತೀರಾ ಹಗುರವಾಗಿ ಕೈಗೂಡಿಬಿಡುತ್ತಿತ್ತು.

ಧೃತರಾಷ್ಟ್ರನ ಇಚ್ಛೆಯಂತೆಯೇ ಎಲ್ಲವೂ ನಡೆಯುತ್ತಿತ್ತು. ಧೃತರಾಷ್ಟ್ರ ಬಂಧಿಗಳನ್ನು ಬಿಡುಗಡೆ ಮಾಡಿಬಿಡುತ್ತಿದ್ದ, ಮರಣದಂಡನೆ